**ಎಲ್ ಎ ಸಿ ನಂಃ 42/2015**
**ಆರ್ ಡಬ್ಲ್ಯೂ ಃ 2**

**ದಿಃ 10.07.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ 1ನೇ ಎದುರುದಾರರ ವಾರಸುದಾರರ ಪರ ಶ್ರೀ ಸಿ ಎಂ ವಕೀಲರಿಂದಃ-**

ತಿಮ್ಮಸಂದ್ರ ಗ್ರಾಮದ ಸರ್ವೆ ನಂ. 68 ಕ್ಕೆ ಸಂಬಂಧಪಟ್ಟಂತೆ 1931 ನೇ ಸಾಲಿನ ಕ್ರಯ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರ ಎಂದರೆ ಸಾಕ್ಷಿಯು ನಮ್ಮ ವಕೀಲರಿಗೆ ನೀಡಿರುತ್ತೇವೆ ಎಂದು ನುಡಿಯುತ್ತಾರೆ. ನನ್ನ ತಾತ ಪುಟ್ಟಯ್ಯನವರ ಇಬ್ಬರು ಹೆಂಡತಿಯರು ಸದರಿ ಸ್ವತ್ತನ್ನು ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ತೋರಿಸಲು ವಿಭಾಗ ಪತ್ರವನ್ನು ಹಾಜರುಪಡಿಸಿದ್ದಾರ ಎಂದರೆ ಸಾಕ್ಷಿ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದೇವೆ ಎಂದು ನುಡಿಯುತ್ತಾರೆ. ಸರ್ವೆ ನಂ. 68 ರ ಜಮೀನು ಪುಟ್ಟಯ್ಯನವರ ಚಿಕ್ಕ ಹೆಂಡತಿಯ ಮಕ್ಕಳಿಗೆ ವಿಭಾಗದ ಮೂಲಕ ಭಾಗ ಬರದಿದ್ದರೂ ಸಹ ತಾವು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಚಿಕ್ಕಚನ್ನಮ್ಮನವರ ಮಕ್ಕಳು ನಂಜುಂಡಯ್ಯ, ಮಾರಯ್ಯ ಮತ್ತು ಚಿಕ್ಕಮಾರಯ್ಯ ನವರು ಸರ್ವೆ ನಂ. 68 ನ್ನು ವಿಭಾಗ ಮಾಡಿಕೊಂಡಿರುವ ಬಗ್ಗೆ ತಾವೇನಾದರೂ ದಾಖಲಾತಿಯನ್ನು ಹಾಜರುಪಡಿಸಿದ್ದೀರ ಎಂದರೆ ಸಾಕ್ಷಿಯು ನಮ್ಮ ಭಾಗಕ್ಕೆ ಬಂದಿರುವ ಸ್ವತ್ತಿಗೆ ಸಂಬಂಧಪಟ್ಟಂತೆ ದಾಖಲಾತಿಗಳನ್ನು ಹಾಜರುಪಡಿಸಿದ್ದೇನೆ. ಸರ್ವೆ ನಂ. 68 ರಲ್ಲಿ ತಮಗೆ ಭಾಗ ಬರದಿದ್ದರು ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಅಸಲು ದಾವಾ ಸಂಖ್ಯೆ 157/2014 ರಲ್ಲಿ ಪುಟ್ಟಮಾರಯ್ಯ ನ ಮಕ್ಕಳಾದ ರಾಮಚಂದ್ರಯ್ಯ ಮತ್ತು ಬಸವರಾಜು ರವರನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸಾಕ್ಷಿ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ರಾಮಚಂದ್ರಯ್ಯ ಮತ್ತು ಬಸವರಾಜು ರವರನ್ನು ಅಸಲು ದಾವಾ ಸಂಖ್ಯೆ 157/2014 ರಲ್ಲಿ ಪಕ್ಷಗಾರರನ್ನಾಗಿ ಮಾಡದೆ ಸದರಿ ದಾವೆಯನ್ನು ತಾವು ರಾಜಿ ಮಾಡಿಕೊಂಡಿದ್ದೀರಿ ಎಂದರೆ ಸರಿಯಲ್ಲ. ತಾವು ಮತ್ತೊಂದು ದಾವೆಯನ್ನು ಸರ್ವೆ ನಂ. 68, ವಿಸ್ತೀರ್ಣ 21 ಗುಂಟೆ ಜಮೀನಿಗೆ ಸಂಬಂಧಪಟ್ಟಂತೆ ಅಸಲು ದಾವಾ ಸಂಖ್ಯೆ 352/2014 ರ ದಾವೆಯನ್ನು ಮಾಗಡಿಯ ಸಿವಿಲ್ ನ್ಯಾಯಾಲಯದಲ್ಲಿ ಸಲ್ಲಿಸಿದ್ದೀರಿ ಎಂದರೆ ಸರಿ. ಸದರಿ ದಾವೆಯು ವಜಾ ಆಗಿದೆ. ಸದರಿ ದಾವೆಯ ತೀರ್ಪು ಮತ್ತು ಡಿಕ್ರಿಯ ವಿರುದ್ಧ ಮೇಲ್ಮನವಿಯನ್ನು ಸಲ್ಲಿಸಿದ್ದೀರ ಎಂದರೆ ಸಾಕ್ಷಿಯು

**ಎಲ್ ಎ ಸಿ ನಂಃ 42/2015**

**ಆರ್ ಡಬ್ಲ್ಯೂ ಃ 2**

ಮೇಲ್ಮನವಿಯನ್ನು ಸಲ್ಲಿಸಲು ತಯಾರು ಮಾಡಿಕೊಳ್ಳುತ್ತಿದ್ದೇವೆ ಎಂದು ನುಡಿಯುತ್ತಾರೆ. ಅಸಲು ದಾವಾ ಸಂಖ್ಯೆ 352/2014 ರ ದಾವೆಯನ್ನು ಹೂಡುವ ಕಾಲಕ್ಕೆ ಸರ್ವೆ ನಂ. 68 ರ 21 ಗುಂಟೆ ಜಮೀನಿಗೆ ಸಂಬಂಧಪಟ್ಟಂತೆ ಪಹಣಿ ಪತ್ರಿಕೆ ತಮ್ಮ ಹೆಸರಿನಲ್ಲಿರಲಿಲ್ಲ ಎಂದರೆ ಸರಿ. ಅಸಲು ದಾವಾ ಸಂಖ್ಯೆ 352/2014 ರ ದಾವೆಯನ್ನು ಹೂಡಿದ ನಂತರ ಅಸಲು ದಾವಾ ಸಂಖ್ಯೆ 157/2014 ರ ರಾಜಿ ಡಿಕ್ರಿ ಪ್ರಕಾರ ಸರ್ವೆ ನಂ. 68 ರ 21 ಗುಂಟೆ ಜಮೀನಿಗೆ ಸಂಬಂಧಪಟ್ಟಂತೆ ಪಹಣಿ ಪತ್ರಿಕೆಯನ್ನು ತಾವು ಸೃಷ್ಟಿ ಮಾಡಿಕೊಂಡಿದ್ದೀರಿ ಎಂದರೆ ಸರಿಯಲ್ಲ. ದಾವಾ ಸ್ವತ್ತು ಭೂಸ್ವಾಧೀನವಾಗುವ ಕಾಲಕ್ಕೆ ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಪಹಣಿ ಪತ್ರಿಕೆಯಲ್ಲಿ ತಮ್ಮ ಹೆಸರು ಇರಲಿಲ್ಲ ಎಂದರೆ ಸರಿಯಲ್ಲ. ಪರಿಹಾರದ ಹಣವನ್ನು ಪಡೆಯುವ ಉದ್ದೇಶದಿಂದ ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಪಹಣಿ ಪತ್ರಿಕೆಯನ್ನು ತಮ್ಮ ಹೆಸರಿಗೆ ಮಾಡಿಸಿಕೊಂಡು ಈ ಅರ್ಜಿಯಲ್ಲಿ ತಾವು ಪಕ್ಷಗಾರರನ್ನಾಗಿ ಸೇರಿಕೊಂಡಿದ್ದೀರಿ ಎಂದರೆ ಸರಿಯಲ್ಲ. ತಾವು ನ್ಯಾಯಾಲಯಕ್ಕೆ ಬಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**